<u>ಕರ್ನಾಟಕ ಸರ್ಕಾರ</u>

ಸಂ: ಅಪಜೀ 110 ಎಫ್‌ಎಪಿ 2011

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 18-05-2011

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಇವರಿಗೆ:

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
ಅರಣ್ಯಭವನ, ಮಲ್ಲೇಶ್ವರಂ,
ಬೆಂಗಳೂರು-03.

ಮಾನ್ಯರೆ,

ವಿಷಯ: 2011-12ನೇ ಸಾಲಿನಿಂದ ಲೆಕ್ಕ ಶೀರ್ಷಿಕೆ 2406-01-101-2-26- ಡೆವಲಪ್‌ಮೆಂಟ್ ಅಂಡ್ ಪ್ರಿಸರವೇಷನ್ ಆಫ್ ದೇವರಕಾಡು-139- ಮೇಜರ್‌ವರ್ಕ್ಸ್ ಅಡಿ ಅನುಷ್ಠಾನಗೊಳ್ಳುವ ದೈವಿವನ ನಿರ್ಮಾಣದ ಕುರಿತು.

ಉಲ್ಲೇಖ: ನಿಮ್ಮ ಪತ್ರ ಸಂಖ್ಯೆ: ಬಿ5/ದೈವಿವನ/ಸಿಆರ್-27/2010-11, ದಿನಾಂಕ: 30-03-2011

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದೆಡೆಗೆ ಗಮನ ಸೆಳೆಯಲಾಗಿದೆ. ಮಾನ್ಯ ಅರಣ್ಯ ಸಚಿವರು ನೀಡಿರುವ ನಿರ್ದೇಶನದಂತೆ ದೇವರಕಾಡು ಯೋಜನೆ ಮತ್ತು ಲೆಕ್ಕ ಶೀರ್ಷಿಕೆಯಡಿಯಲ್ಲಿ ದೈವಿವನಗಳನ್ನು ಅಭಿವೃದ್ಧಿ ಪಡಿಸಬೇಕಾಗುತ್ತದೆ. ದೇವರಕಾಡು ಅಂದರೆ ದೈವಿವನ. ದೈವಿ ವನವು ಹೊಸ ಯೋಜನೆಯಾಗುವುದಿಲ್ಲ.

ಮಾನ್ಯ ಮುಖ್ಯಮಂತ್ರಿಯವರು 2011-12ನೇ ಸಾಲಿಗೆ ಮಂಡಿಸಿರುವ ಆಯವ್ಯಯದಲ್ಲಿ "ದೈವಿವನ" ಎಂಬ ಹೊಸ ಯೋಜನೆಯನ್ನು ಘೋಷಿಸಿರುವುದಿಲ್ಲ.

ದೇವರಕಾಡು ಲೆಕ್ಕ ಶೀರ್ಷಿಕೆಯಡಿ ದೈವಿವನ ಅಭಿವೃದ್ಧಿ ಪಡಿಸಲು ನಿಮ್ಮ ಪ್ರಸ್ತಾವನೆಯೊಂದಿಗೆ ಸಲ್ಲಿಸಿರುವ ಕಾರ್ಯಕ್ರಮದ ಉದ್ದೇಶ ರೂಪರೇಷೆಗಳು 2011-12ನೇ ಸಾಲಿನಲ್ಲಿ ಕೈಗೊಳ್ಳಬೇಕಾಗಿರುವ ಕಾಮಗಾರಿಗಳ ವಿವರ ಮತ್ತು ಸದರಿ ಕಾಮಗಾರಿಗಳಿಗೆ ತಗಲುವ ಅಂದಾಜು ವೆಚ್ಚವನ್ನೊಳಗೊಂಡ ಅನುಬಂಧ-1 ಕ್ಕೆ ಮಾನ್ಯ ಅರಣ್ಯ ಸಚಿವರ ಅನುಮೋದನೆಯೊಂದಿಗೆ ಸರ್ಕಾರದ ಅನುಮೋದನೆ ನೀಡಿದೆ ಎಂದು ತಿಳಿಸಲು ನಿರ್ದೇಶಿತನಾಗಿದ್ದೇನೆ.

ನಿಮ್ಮ ನಂಬುಗೆಯ,

ಒ/ಸಿ

(ಸುಬ್ರಾಯ ಕಾಮತ್)
ಸರ್ಕಾರದ ಉಪ ಕಾರ್ಯದರ್ಶಿ,
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

18/5/11

21/5

ಸಂಖ್ಯೆ: ಬಿ5/ದೈವಿವನ/ಸಿಆರ್-     /2010-11

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಸಂಪನ್ಮೂಲ ನಿರ್ವಹಣೆ) ರವರ ಕಛೇರಿ,
ಅರಣ್ಯ ಭವನ, ಮಲ್ಲೇಶ್ವರಂ,
ಬೆಂಗಳೂರು ದಿನಾಂಕ: 23.05.2011

ಪ್ರತಿಯನ್ನು ಅನುಬಂಧ-1ರ ಪ್ರತಿಯೊಂದಿಗೆ ಲಗತ್ತಿಸಿ, ರಾಜ್ಯದ ಎಲ್ಲಾ ವೃತ್ತ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಪ್ರಾದೇಶಿಕ), ಇವರುಗಳಿಗೆ ಮಾಹಿತಿಗಾಗಿ ಮತ್ತು ಅಗತ್ಯ ತುರ್ತು ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಸಂಪನ್ಮೂಲ ನಿರ್ವಹಣೆ)

## ಅನುಬಂಧ-1

**2011-12ನೇ ಸಾಲಿನಿಂದ ಲೆಕ್ಕ ಶೀರ್ಷಿಕೆ 2406-01-101-2-26-ಡೆವಲಪ್‌ಮೆಂಟ್ ಅಂಡ್ ಪ್ರಿಸರವೇಷನ್ ಆಫ್ ದೇವರಕಾಡು-139-ಮೇಜರ್‌ವರ್ಕ್ಸ್ ಅಡಿ ಅನುಷ್ಠಾನಗೊಳ್ಳುವ 'ದೈವಿವನ' ಅಭಿವೃದ್ಧಿ ಕುರಿತು.**

** ** **

### 1. ಪೀಠಿಕೆ:

ಮಾನವನ ಬದುಕಿನಲ್ಲಿ ಮರಗಿಡಗಳು ಅತ್ಯಂತ ಪ್ರಮುಖ ಪಾತ್ರ ವಹಿಸುತ್ತಾ ಬಂದಿದ್ದು, ಅವು ಅವನ ಜೀವನದಲ್ಲಿ ಹಾಸು ಹೊಕ್ಕಾಗಿವೆ. ವೇದಗಳೂ ಸಹ ಈ ಅಂಶವನ್ನು ಹಾಡಿ ಹೊಗಳಿವೆ. ಪ್ರಾಚೀನ ಕಾಲದಲ್ಲಿ ನಮ್ಮ ಪೂರ್ವಜರು ಸಸ್ಯಗಳನ್ನು ಆರಾಧಿಸಿ, ಪೂಜಿಸಿ, ಆರೋಗ್ಯ ಭಾಗ್ಯವನ್ನು ಪಡೆದುಕೊಳ್ಳುತ್ತಿದ್ದರು. ಧಾರ್ಮಿಕ ವೃಕ್ಷಗಳನ್ನು ಪೂಜಿಸುವುದರಿಂದಲೂ ಹಾಗೂ ಆಯಾ ವ್ಯಕ್ತಿಗಳಿಗೆ ಸಂಬಂಧಿಸಿದ ವೃಕ್ಷಗಳ ಬಳಿ ಕುಳಿತು ಧ್ಯಾನ ಮಾಡುವುದರಿಂದಲೂ ಆರೋಗ್ಯ ಭಾಗ್ಯ ಹಾಗೂ ಸಕಲ ಸನ್ಮಂಗಳವನ್ನು ಪಡೆಯಬಹುದು. ಮಹಾನ್ ವ್ಯಕ್ತಿಗಳಾದ ಬುದ್ಧ, ಮಹಾವೀರ, ಏಸುಕ್ರಿಸ್ತ, ಮಹಮದ್ ಪೈಗಂಬರ್ ಮೊದಲಾದವರು ವೃಕ್ಷಗಳ ಕೆಳಗೆ ಕುಳಿತು ಧ್ಯಾನ ಮಡಿ ಜ್ಞಾನವನ್ನು ಪಡೆದುಕೊಂಡರು. ವೃಕ್ಷಗಳು ಟೆಲಿವಿಷನ್ ಅಂಟೆನಾದ ರೀತಿಯಲ್ಲಿ ಕೆಲಸ ಮಾಡಿ ಮಾನವನ ಪ್ರಾರ್ಥನೆಯನ್ನು ದೇವರಿಗೆ ತಲುಪಿಸುವಲ್ಲಿ ಹಾಗೂ ದೇವರಿಂದ ಬಂದ ಆಶೀರ್ವಾದವನ್ನು ವಾಪಸ್ಸು ಮಾನವನಿಗೆ ಮುಟ್ಟಿಸುವಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತವೆ.

### 2. ಉದ್ದೇಶಗಳು:

ವಿವಿಧ ದೇವಸ್ಥಾನಗಳ ಸುತ್ತಮುತ್ತ ವಿವಿಧ ರೀತಿಯ ಪವಿತ್ರ ವನಗಳು ಮತ್ತು ದೈವತ್ವವುಳ್ಳ ಪೂಜಾ ವೃಕ್ಷಗಳನ್ನು ಬೆಳೆಸುವುದರಿಂದ ಅಳುವಿನ ಅಂಚಿನಲ್ಲಿರುವ ವೃಕ್ಷಗಳನ್ನು ಸಹ ಪರೋಕ್ಷವಾಗಿ ಸಂರಕ್ಷಿಸಿದಂತಾಗುತ್ತದೆ. ರಾಶಿವನ, ನವಗ್ರಹವನ, ನಕ್ಷತ್ರವನ, ತಪೋವನ, ಪಂಚಾಯಿತಿ ವನ, ಅಷ್ಟದಿಕ್ಪಾಲಕ ವನ, ಇತ್ಯಾದಿ ವಿವಿಧ ವನಗಳನ್ನು ನಿರ್ಮಾಣ ಮಾಡಿ, ಆಲ, ಅರಳಿ, ಬೇವು, ಬನ್ನಿ, ತಾರೆ, ಬಿಲ್ವಪತ್ರೆ, ಗೋಣಿ, ನೇರಳೆ, ನಾಗಸಂಪಿಗೆ, ಎಕ್ಕ, ಕಗ್ಗಲಿ, ಅತ್ತಿ, ಇತ್ಯಾದಿ ಧಾರ್ಮಿಕ ಮಹತ್ವವನ್ನು ಹೊಂದಿರುವ ವೃಕ್ಷಗಳನ್ನೂ ಬೆಳೆಸುವುದರ ಜೊತೆಗೆ ಸ್ಥಳೀಯವಾಗಿ ಹೂ ಮತ್ತು ಹಣ್ಣು ಬಿಡುವ ಹಾಗೂ ಅಳುವಿನ ಅಂಚಿನಲ್ಲಿರುವ ವೃಕ್ಷಗಳನ್ನು ಸಹ ದೈವಿವನದಲಿ ಬೆಳೆಸಲು ಕಾರ್ಯಕ್ರಮ ಹಮ್ಮಿಕೊಂಡಿದೆ. ಈ ದೈವಿವನಗಳಿಗೆ ಭೇಟಿ ನೀಡುವ ಸಾರ್ವಜನಿಕರಿಗೆ ಮತ್ತು ಶಾಲಾ ಮಕ್ಕಳಿಗೆ ಅರಣ್ಯ ಸಂರಕ್ಷಣೆಯ ಬಗ್ಗೆ ಅರಿವು ಮೂಡಿಸಿ, ಜೀವಿ ಪರಿಸರದ ಬಗ್ಗೆ ತಿಳುವಳಿಕೆ ನೀಡಲಾಗುವುದು. ಮುಂದುವರೆದು, ಈ ದೈವಿವನಗಳಿಂದ ಉತ್ತಮ ಪರಿಸರ ಹೊಂದುವುದರ ಜೊತೆಗೆ ಜನರ ಹಾಗೂ ಸಮುದಾಯದ ಆರೋಗ್ಯವು ಸಹ ಉತ್ತಮಗೊಳ್ಳುತ್ತದೆ.

### 3. ದೈವಿವನ ಅಭಿವಧ್ಧಿ ಮತ್ತು ಸಂರಕ್ಷಣೆ ಯೋಜನೆಯ ರೂಪರೇಷೆಗಳು:

ದೈವಿವನವನ್ನು ಪಕ್ಕದ ರಾಜ್ಯವಾದ ಆಂದ್ರಪ್ರದೇಶದಲ್ಲಿರುವ ತಿರುಪತಿ-ತಿರುಮಲ ಬೆಟ್ಟವನ್ನು ಅಭಿವೃದ್ಧಿ ಪಡಿಸಿದ ಮಾದರಿಯಲ್ಲಿ ಅಭಿವೃದ್ಧಿಪಡಿಸಲಾಗುವುದು. ದೈವಿವನ ನಿರ್ಮಿಸಲು ಆಯ್ಕೆ ಮಾಡುವ ಪ್ರದೇಶವು ಧಾರ್ಮಿಕ ಕ್ಷೇತ್ರಕ್ಕೆ ಸಮೀಪವಾಗಿರಬೇಕು ಮತ್ತು ಸಾರ್ವಜನಿಕರಿಗೆ ಭೇಟಿ ನೀಡಲು ಅನುಕೂಲವಾಗಿರಬೇಕು. ಯಾವ ಜಿಲ್ಲೆಗಳಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಜನರು ಹೆಚ್ಚಾಗಿ ~~(ಶೇ 50 ಕ್ಕಿಂತ ಹೆಚ್ಚು)~~ ಯಾವ ದೈವಿವನ ನಿರ್ಮಿಸಲು ಆಯ್ಕೆ ಮಾಡಿರುವ ಪ್ರದೇಶವನ್ನು ಭೇಟಿ ಕೊಡುತ್ತಾರೋ ಅಂತಹ ಪ್ರದೇಶದಲ್ಲಿ ದೈವಿವನವನ್ನು ವಿಶೇಷ ಘಟಕ ಯೋಜನೆಯಡಿ ಅಭಿವೃದ್ಧಿಪಡಿಸಿ ಸಂರಕ್ಷಿಸಲಾಗುವುದು. ಅದೇ ರೀತಿ ಯಾವ ಜಿಲ್ಲೆಗಳಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಿದ ಜನರು ಹೆಚ್ಚಾಗಿ ~~(ಶೇ 50 ಕ್ಕಿಂತ ಹೆಚ್ಚು)~~ ಯಾವ ದೈವಿವನ ನಿರ್ಮಿಸಲು ಆಯ್ಕೆ ಮಾಡಿರುವ ಪ್ರದೇಶವನ್ನು ಭೇಟಿ ಕೊಡುತ್ತಾರೋ ಅಂತಹ ಪ್ರದೇಶದಲ್ಲಿ ದೈವಿವನವನ್ನು ಗಿರಿಜನ ಉಪಯೋಜನೆಯಡಿ ಅಭಿವೃದ್ಧಿಪಡಿಸಿ ಸಂರಕ್ಷಿಸಲಾಗುವುದು.

ದೈವಿವನ ಅಭಿವೃದ್ಧಿ ಮತ್ತು ಸಂರಕ್ಷಣೆ ಯೋಜನೆಯಡಿಯಲ್ಲಿ ಕೆಳಗಿನ ಪ್ರಮುಖ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸಲಾಗುವುದು.

1. ಪ್ರತಿಯೊಂದು 'ದೈವಿವನ' ಅಭಿವೃದ್ಧಿ ಮತ್ತು ಸಂರಕ್ಷಣೆ ಕುರಿತು ಐದು ವರ್ಷಗಳ ಅವಧಿಗೆ ಸ್ಥಳೀಯ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಒಂದು ವಿವರವಾದ ಯೋಜನೆಯನ್ನು (Work Plan) ಸಂಬಂಧಿಸಿದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ತಯಾರಿಸಿ, ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಬೇಕು.
2. ದೈವಿವನ ನಿರ್ಮಿಸಲು ಪ್ರತಿ ಜಿಲ್ಲೆಯಲ್ಲಿ ಅಂದಾಜು 300 ಹೆಕ್ಟೇರ್ (750 ಎಕರೆ) ನಷ್ಟು ಸೂಕ್ತ ಅರಣ್ಯ ಮತ್ತು ಅರಣ್ಯೇತರ ಸರ್ಕಾರಿ ಪ್ರದೇಶವನ್ನು ಆಯ್ಕೆ ಮಾಡಲಾಗುವುದು. ಹಾಗೂ ಹೀಗೆ ಆಯ್ಕೆ ಮಾಡಿದ ಪ್ರದೇಶದಲ್ಲಿ ಪ್ರತಿ ವರ್ಷ 100 ಹೆಕ್ಟೇರ್ (250 ಎಕರೆ) ಪ್ರದೇಶದಲ್ಲಿ ದೈವಿವನವನ್ನು ಮೂರು ವರ್ಷಗಳವರೆಗೆ ಅಭಿವೃದ್ಧಿ ಪಡಿಸಿ ನಂತರ 2 ವರ್ಷಗಳವರೆಗೆ ನಿರ್ವಹಣೆ ಮಾಡಲಾಗುವುದು. ದೈವಿವನದ ರಕ್ಷಣೆಗೆ ಚೈನ್‌ಲಿಂಕ್ ಬೇಲಿ ನಿರ್ಮಿಸುವುದು.
3. ದೈವಿವನದಲ್ಲಿ ಸಸ್ಯಕ್ಷೇತ್ರವನ್ನು ಸ್ಥಾಪಿಸಿ, ಧಾರ್ಮಿಕ ಮಹತ್ವವುಳ್ಳ, ಅಳಿವಿನ ಅಂಚಿನಲ್ಲಿರುವ, ಹಾಗೂ ಸ್ಥಳೀಯವಾಗಿ ಹೂ ಮತ್ತು ಹಣ್ಣು ಬಿಡುವ ಮರಗಳ ಸಸಿಗಳನ್ನು ಬೆಳೆಸಿ ಸಾರ್ವಜನಿಕರಿಗೆ ಸರ್ಕಾರವು ನಿಗದಿಪಡಿಸಿದ ದರದಲ್ಲಿ ವಿತರಿಸುವುದು.
4. ವಿವಿಧ ಧಾರ್ಮಿಕ ವನಗಳನ್ನು 'ದೈವಿವನ'ದಅವಶ್ಯಕತೆ ಮತ್ತು ಸೂಕ್ತ ಸ್ಥಳದ ಲಭ್ಯತೆಗೆ ಅನುಗುಣವಾಗಿ ಅಭಿವೃದ್ಧಿ ಮಾಡುವುದು.
5. ಅಭಿವೃದ್ಧಿ ಕಾಮಗಾರಿಗಳಾದ (ಅ) ಪ್ರಮುಖ ಸಸ್ಯ ಸಂಕುಲಗಳನ್ನು ಗುರುತಿಸುವುದು (Labelling) (ಆ) ಪುಟ್ ಪಾಥಗಳ ಅಭಿವೃದ್ಧಿ (ಇ) ಶೈಕ್ಷಣಿಕ ಉದ್ದೇಶಕ್ಕಾಗಿ ಇಕೋ ಟ್ರೇಲ್ಸ್ (Eco-Trails) ಗಳನ್ನು ಗುರುತಿಸುವುದು ಇತ್ಯಾದಿಗಳನ್ನು 'ದೈವಿವನ' ಪ್ರದೇಶದಲ್ಲಿ ಅನುಷ್ಠಾನಗೊಳಿಸಲಾಗುವುದು.
6. ದೈವಿವನ ಅಭಿವೃದ್ಧಿ ಮತ್ತು ಸಂರಕ್ಷಣೆ ಕುರಿತು ಭಕ್ತಾಧಿಗಳಲ್ಲಿ ವಿಶೇಷವಾಗಿ ಮಕ್ಕಳಲ್ಲಿ ಅರಿವು ಮೂಡಿಸುವ ಚಟುವಟಿಕೆಗಳು, ಪ್ರಚಾರ, ಇತ್ಯಾದಿ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು.

**4. <u>2011-12ನೇ ಸಾಲಿಗೆ 100 ಹೆ. ಪ್ರದೇಶದಲ್ಲಿ ದೈವಿವನ ನಿರ್ಮಾಣ ಮಾಡಲು ಬೇಕಾಗುವ ಅಂದಾಜು ಅನುದಾನ</u>**

| | | |
|---|---|---|
| 1 | ಸಸ್ಯಕ್ಷೇತ್ರ ಸ್ಥಾಪನೆ | ರೂ. 5.00 ಲಕ್ಷ |
| 2 | 100 ಹೆ. ಪ್ರದೇಶದಲ್ಲಿ ಚೈನ್‌ಲಿಂಕ್ ಬೇಲಿ ನಿರ್ಮಾಣ (ಪ್ರತೀ ಕಿ.ಮೀ ಗೆ 15.00 ಲಕ್ಷದ ಪ್ರಕಾರ) | ರೂ.75.00 ಲಕ್ಷ |
| 3 | <u>ಸಾರ್ವಜನಿಕರಿಗೆ ವಿತರಿಸಲು ಸಸಿಗಳನ್ನು ಬೆಳೆಸುವುದು</u><br>1. 5"X8" ಅಳತೆಯ 1.00 ಲಕ್ಷ ಸಸಿಗಳಿಗೆ<br>2. 8"X12" ಅಳತೆಯ 0.50 ಲಕ್ಷ ಸಸಿಗಳಿಗೆ | <br>ರೂ. 2.50 ಲಕ್ಷ<br>ರೂ. 4.25 ಲಕ್ಷ |
| 4 | 100 ಹೆ ಪ್ರದೇಶದಲ್ಲಿ ಮುಂಗಡ ಕಾಮಗಾರಿಗಳು | ರೂ.14.63 ಲಕ್ಷ |
| 5 | ನೆಡುತೋಪು ಬೆಳೆಸಲು 10"X16" ಅಳತೆಯ 0.22 ಲಕ್ಷ ಸಸಿಗಳನ್ನು ಬೆಳೆಸುವುದು. | ರೂ. 4.25 ಲಕ್ಷ |
| 6 | ಪ್ರಚಾರ ಕಾರ್ಯಕ್ರಮಗಳು, ದಾಖಲೀಕರಣ ಇತ್ಯಾದಿ ವೆಚ್ಚಗಳು | ರೂ. 0.37 ಲಕ್ಷ |
| | ಒಟ್ಟು | **ರೂ.106.00 ಲಕ್ಷ** |

100 ಹೆಕ್ಟೇರ್ ಪ್ರದೇಶದಲ್ಲಿ ಒಂದು ದೈವಿವನವನ್ನು ಅಭಿವೃದ್ಧಿ ಪಡಿಸಿ ಸಂರಕ್ಷಿಸಲು ಅಂದಾಜು ರೂ. 1.06 ಕೋಟಿ ಅನುದಾನ ಅಗತ್ಯವಿರುತ್ತದೆ. 2011-12 ನೇ ಸಾಲಿನಲ್ಲಿ ಒಟ್ಟು 30 ಜಿಲ್ಲೆಗಳಲ್ಲಿ ಪ್ರತೀ ಜಿಲ್ಲೆಗೆ ಒಂದು ದೈವಿವನವನ್ನು ಅಭಿವೃದ್ಧಿ ಪಡಿಸಲಾಗುವುದು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)